ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 6/4/2021

ಭರವಸೆಗಳ ಈಡೇರಿಕೆಯಲ್ಲಿ ಇಲಾಖೆ ಮುಖ್ಯಸ್ಥರು ವಿಫಲ

ವಿಧಾನಸಭೆ ವಿಧಾನಮಂಡಲ ಅಧಿವೇಶನದಲ್ಲಿ ಸಚಿವರು ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರು ವಿಫಲರಾಗಿದ್ದಾರೆ ಎಂದು ಸರ್ಕಾರ ಭರವಸೆಗಳ ಸಮಿತಿ ತಿಳಿಸಿದೆ. ಬುಧವಾರ ಭರವಸೆಗಳ ಸಮಿತಿ ಅಧ್ಯಕ್ಷ ಕೆ. ರಘುಪತಿ ಭಟ್ 2020-21 ನೇ ಸಾಲಿನ ವರದಿ ಮಂಡಿಸಿದ್ದು ಸಚಿವರು ಸದನದಲ್ಲಿ ನೀಡಿರುವ ಭರವಸೆಗಳು [illegible] ಉಳಿದಿ ಎಂದು ತಿಳಿಸಿದ್ದು ಈ ರೀತಿಯಾದರೆ ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಅಧಿವೇಶನ ಹಾಗೂ ವಂತರದ ಸಂದರ್ಭಗಳಲ್ಲಿ ಕೇಳಿ ಬರುವ ಆರೋಪ, ಅವ್ಯವಹಾರ, ಹಾಗೂ ದುರುಪಯೋಗ ಸೇರಿ ಅಕ್ರಮಗಳ ಕುರಿತು ನಿಗದಿತ ಸಮಯದೊಳಗೆ ಕಮ್ಮ ಕೈಗೊಳ್ಳುವ ಭರವಸೆಯನ್ನು ಸರ್ಕಾರ ಹಾಗೂ ಸಚಿವರು ನೀಡಿರುತ್ತಾರೆ. ಆದರೆ ಸಚಿವರು ನೀಡಿದ ಭರವಸೆ ಜಾರಿಗೊಳಿಸಿದೆ ಅಧಿಕಾರಿಗಳು ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.